

ಅದೇ ಕುರ್ಚಿಯಲ್ಲಿ ಕುಕ್ಕರಿಸುತ್ತಾನೆ.

ರೂಮಿನಲ್ಲಿರುವ ಕಮಲಾಕ್ಷಿ ಕಪಾಟಿನಿಂದ ಒಂದು ಪುಸ್ತಕವನ್ನು ಕೈಗೆತ್ತಿಕೊಂಡು ಅದರ ರಟ್ಟಿನ ಮೇಲೆ ಕಣ್ಣಿಟ್ಟದ್ದೇ ಕ್ಯಾಮೆರಾ ಝೂಮ್ ಇನ್: ಪುಸ್ತಕದ ಹೆಸರು 'ಘೋರ ರಾತ್ರಿ'. ಅವಳು ಹತ್ತಾರು ಪುಟಗಳನ್ನು ತಿರುಗಿಸಿ ತಿರುಗಿಸಿ ಕಡೆಗೆ ಒಂದು ಪುಟದಲ್ಲಿ ಕಣ್ಣಿಡುತ್ತಾಳೆ.

ಸಿನಿಮಾದಲ್ಲಿ ನಿರ್ದೇಶಕ ಏನೆಲ್ಲ ತೋರಿಸ ಬೇಕೆಂದಿದ್ದಾನೋ ಅದನ್ನೆಲ್ಲ ಒಂದಾದ ಮೇಲೊಂದರಂತೆ ತೋರಿಸಬೇಕಿಲ್ಲ. ನಾವು ನಿರ್ದೇಶಕ ಹೇಗೆ ನೋಡಬೇಕೆಂದು ಇಚ್ಛಿಸುತ್ತಾನೋ ಹಾಗೆಯೇ ಸಿನಿಮಾ ನೋಡುತ್ತೇವೆ. ಅವನು ಹೇಳುವುದನ್ನು ಗ್ರಹಿಸಲು ನಮಗಿರುವುದು ಒಂದೆರಡು ನಿಮಿಷ ಅಥವಾ ಸೆಕೆಂಡು. ನಾವು ಏನನ್ನಾದರೂ ಗ್ರಹಿಸಲಾಗದಿದ್ದರೆ ಅವನು ಪುನರಾವರ್ತಿಸುವುದಿಲ್ಲ. ಆ ಕಾದಂಬರಿಯಲ್ಲಿ ಕಮಲಾಕ್ಷಿಯ ಹಾಗೆಯೇ ಇರುವ ಒಬ್ಬಳು ರಮಾಕಾಂತನ ಹಾಗೆಯೇ ಇರುವ ಒಬ್ಬನ ಜೊತೆ ಒಂದು ಸಿನಿಮಾಕ್ಕೆ ಹೋಗುತ್ತಾಳೆ. ಸಿನಿಮಾದ ಹೆಸರು 'ಘೋರ ರಾತ್ರಿ'. ಇಬ್ಬರೂ ಥಿಯೇಟರಿನ ಕತ್ತಲಿನಲ್ಲಿ ಅಕ್ಕಪಕ್ಕ ಕೈಕೈ ಹಿಡಿದುಕೊಂಡು ಕೂತು ಯಾವುದೋ ಸುಖಾನುಭವವನ್ನು ನಿರೀಕ್ಷಿಸುತ್ತಿರುವಾಗ ಕ್ಯಾಮೆರಾ ಆಕಾಶದ ಬಿಳಿ ಮೋಡಗಳನ್ನು ತೋರಿಸಿ ನಿಧಾನವಾಗಿ ಕೆಳಗಿಳಿದು ಒಂದು ಗುಡ್ಡದಗುಂಟ ಸಾಗಿ, ಎತ್ತರ ಬೆಳೆದ ಹತ್ತಾರು ಮರಗಳನ್ನೂ ಒಂದು ದೇವಸ್ಥಾನವನ್ನೂ ದಾಖಲಿಸಿ ಕಡೆಗೆ ತುಂಬ ಹಳೆಯದಾದ, ನಾಡಹೆಂಚಿನ ಇಳಿಜಾರು ಚಾವಣಿಯಿರುವ ಒಂದು ಮನೆಯ ಮುಚ್ಚಿದ ಬಾಗಿಲಿಗೆ ಬಂದದ್ದೇ ಝೂಮ್‌ಇನ್. ತುಂಬಾ ಹಳೆಯ ಮನೆ. ಎಷ್ಟು ಹಳೆಯದೆಂದರೆ ಈಗಲೋ ಆಗಲೋ ಉರುಳಿಬೀಳುವಂತಿರುವ, ಒಂದಷ್ಟು ಮಂದಿ ಒಂದು ಬದಿಯಲ್ಲಿ ನಿಂತುಕೊಂಡು ತಮ್ಮ ಬಲವನ್ನೆಲ್ಲ ಬಿಟ್ಟು ನೂಕಿದರೆ ಧಡಾರೆಂದು ಬಿದ್ದುಬಿಡಬಹುದಾದ ಮನೆ. ಗೋಡೆಗಳು ಯಾವ ಕ್ಷಣದಲ್ಲಾದರೂ ಕುಸಿಯುವಂತಿದ್ದರೆ ಚಾವಣಿ ತನ್ನ ಭಾರವನ್ನು ತಾನೇ ತಡೆಯಲಾಗುತ್ತಿಲ್ಲವೆನ್ನುವಂತೆ ಮಧ್ಯದಲ್ಲಿ ಜೋತುಬಿದ್ದಿದೆ. ನೋಡನೋಡುತ್ತಿದ್ದಂತೆ